ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ. ನಂಜನಗೂಡು ತಾ.

ಮೌಲ್ಯಾಂಕನ-ಮಾರ್ಚ್-2023

ಮಾದರಿ ಪ್ರಶ್ನೆ ಪತ್ರಿಕೆ

ವಿಷಯ : ಪರಿಸರ ಅಧ್ಯಯಯನ ತರಗತಿ: 5 ಅಂಕಗಳು;40 ಸಮಯ: 2 ಗಂಟೆ

ಸೂಚನೆ:

- ಇದು ಕೇವಲ ಮಾದರಿ ಪ್ರಶ್ನೆ ಪತ್ರಿಕೆ (ಅಭ್ಯಾಸಕ್ಕಾಗಿ ಮಾತ್ರ ಬಳಸುವುದು)
- ಟೈಪ್ ಮಾಡುವಾಗ ಅಥವಾ ಪ್ರಶ್ನೆ ತಯಾರಿಸುವಾಗ ಸಣ್ಣ ಪುಟ್ಟ ತಪ್ಪುಗಳಿದ್ದಲ್ಲಿ ಸರಿಪಡಿಸಿಕೊಂಡು ಅಭ್ಯಾಸ ಮಾಡಿಸುವುದು.
- ಈ ಪ್ರಶ್ನೆ ಪತ್ರಿಕೆಯನ್ನು ಇಲಾಖೆ ನೀಡಿರುವ ಮಾದರಿ ಪ್ರಶ್ನೆ ಪತ್ರಿಕೆಯ ಆಧಾರದಲ್ಲಿ ರಚಿಸಲಾಗಿದೆ.

1 ರಿಂದ 20ರ ವರೆಗಿನ ಪ್ರಶ್ನೆಗಳಿಗೆ ನೀಡಲಾಗಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ನಿಗದಿಪಡಿಸಿರುವ ಸ್ಥಳದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ 20 Marks

1. ಭೂಮಿಯ ಭೂಭಾಗ ನಾನಿದ್ದೇನೆ ಎಲ್ಲರ ಬಾಯಾರಿಕೆ ನೀಗಿಸುವೆ ಗಿಡಮರಗಳಿಗೆ ತಂಪು ಕೊಡುವೆ ನಾನು ಯಾರು

a) ಮಣ್ಣು b) ನೀರು c) ಸೂರ್ಯ d) ಗಾಳಿ

2. ಮೈಸೂರು ಜಿಲ್ಲೆಯ ಪ್ರಮುಖ ಬೆಳೆ

a) ಕಾಫಿ b) ಬತ್ತ c) ತೆಂಗು d) ರಾಗಿ

3. ಇವುಗಳಲ್ಲಿ ಮಳೆಯಧಾರಿತ ಕೃಷಿಯ ಬಗ್ಗೆ ಸರಿಯಾದ ಹೇಳಿಕೆ

a) ಖುಷ್ಕಿ ಬೇಸಾಯ b) ಒಣ ಭೂಮಿ ಬೇಸಾಯ

c) ಕೆರೆ ಬಾವಿ ನದಿ ಕಾಲುವೆ ನೀರು ಬಳಸಿ ಕೃಷಿ ಮಾಡುವುದು d) ಮಳೆಯ ದಾರಿತ ಕೃಷಿ ಮಾಡುವುದು

4. ಈ ಚಿತ್ರದಲ್ಲಿರುವ ಕೃಷಿ ಉಪಕರಣದ ಉಪಯೋಗ

a) ಸಮತಟ್ಟು ಮಾಡುವುದು b) ಉಳುವುದು

c) ಕಳೆ ಕೀಳುವುದು d) ಬಿತ್ತನೆ ಮಾಡುವುದು

5. ಬೆಳೆಗಳ ಬೇರುಗಳಿಗೆ ನೀರು ಹನಿ ಹನಿಯಾಗಿ ದೊರೆಯುವಂತೆ ಇರುವ ವ್ಯವಸ್ಥೆ

a) ಹನಿ ನೀರಾವರಿ ಪದ್ಧತಿ b) ತುಂತುರು ನೀರಾವರಿ ಪದ್ಧತಿ

c) ಕೊಳವೆ ನೀರಾವರಿ ಪದ್ಧತಿ d) ಕಾಲುವೆ ನೀರಾವರಿ ಪದ್ಧತಿ

6. ಇವುಗಳು ಸಸ್ಯಗಳಿಂದ ಉತ್ಪತ್ತಿಯಾಗುವ ಆಹಾರ

a) ತುಪ್ಪ b) ಮಾಂಸ c) ಬತ್ತ d) ಜೇನು

7. ಸಿರಿಧಾನ್ಯಗಳನ್ನು ಬರಗಾಲದ ಮಿತ್ರರು ಎಂದು ಕರೆಯುತ್ತಾರೆ ಇದಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆ

a) ಕಡಿಮೆ ನೀರನ್ನು ಬಳಸಿ ಕಡಿಮೆ ಅವಧಿಯಲ್ಲಿ ಬೆಳೆಯುವುದು

b) ಅಧಿಕ ಗೊಬ್ಬರ ಅಧಿಕ ಕ್ರಿಮಿನಾಶಕ ಬಳಕೆ

c) ಹೆಚ್ಚು ಪೋಷಕಾಂಶಗಳನ್ನು ಹೊಂದಿರುವುದಿಲ್ಲ

d) ಎಲ್ಲಾ ವಾಯುಗುಣಗಳಲ್ಲಿ ಸುಲಭವಾಗಿ ಬೆಳೆಯಲು ಆಗುವುದಿಲ್ಲ

8. ಮಗುವಿಗೆ ಆಗಿಂದಾಗೆ ಆಯಾಸವಾಗುತ್ತಿರುತ್ತದೆ ಹಾಗಾದರೆ ಈ ಮಗುವಿಗೆ ಬೇಕಾಗುವ ಆಹಾರ ಪದಾರ್ಥಗಳು

a)ದ್ವಿದಳ ಧಾನ್ಯಗಳು b) ಎಣ್ಣೆ ಬೆಣ್ಣೆ ತುಪ್ಪ c) ಹಸಿರು ಸೊಪ್ಪು ತರಕಾರಿಗಳು d) ಹಾಲು ಮಾಂಸ ಮೊಟ್ಟೆ

9. ಗೋಬಿ ಮಂಚೂರಿ ಪಾನಿಪುರಿ ಚೈನೀಸ್ ಫುಡ್ ಗಳನ್ನು ಜಾಸ್ತಿ ತಿನ್ನಬಾರದು ಕಾರಣ

a) ರಾಸಾಯನಿಕ ಅಂಶ ಜಾಸ್ತಿ ಬಳಕೆ b) ರುಚಿಕರವಾಗಿರುತ್ತದೆ

c) ಶಕ್ತಿಯನ್ನು ಕೊಡುತ್ತದೆ d) ರೋಗಗಳನ್ನು ವಾಸಿಮಾಡುತ್ತದೆ

10. ಹತ್ತಿಯನ್ನು ಮುಟ್ಟಿದಾಗ ಆಗುವ ಅನುಭವ

a) ಭಾರವಾಗಿರುತ್ತದೆ b) ಗಟ್ಟಿಯಾಗಿರುತ್ತದೆ c) ಮೃದುವಾಗಿರುತ್ತದೆ d) ಮೇಲಿನ ಎಲ್ಲವೂ

11. ಈ ಹೇಳಿಕೆಗಳನ್ನು ಓದಿ ದ್ರವ್ಯದ ಲಕ್ಷಣವನ್ನು ಗುರುತಿಸಿ

a) ದ್ರವ್ಯವು ಸ್ಥಳ ಆಕ್ರಮಿಸುತ್ತದೆ b) ಭಾರವಾಗಿರುವುದಿಲ್ಲ

c) ದ್ರವ್ಯರಾಶಿಯನ್ನು ಹೊಂದಿರುತ್ತದೆ d) ಎ ಮತ್ತು ಬಿ ಹೇಳಿಕೆಗಳು

12. ಒಂದು ಪಾತ್ರೆಯಲ್ಲಿ ನೀರನ್ನು ಕುದಿಸಿದಾಗ ನೀರಿನ ಪ್ರಮಾಣವೂ ಮೊದಲಿನ ಪ್ರಮಾಣಕ್ಕಿಂತ ಕಡಿಮೆ ಆಗಿರುತ್ತದೆ ಇದಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆ

a) ನೀರು ಜಾಸ್ತಿ ಕುದಿಯುತ್ತದೆ b) ನೀರಿನ ಪ್ರಮಾಣ ಅಷ್ಟೇ ಇರುತ್ತದೆ

c) ನೀರು ಕಾದು ಆವಿಯಾಗಿ ಗಾಳಿಗೆ ಸೇರುತ್ತದೆ d) ನೀರು ಮಂಜುಗಡ್ಡೆಯಾಗಿ ಬದಲಾಗುತ್ತದೆ

13. ನೀರಿನಿಂದ ಪೂರ್ತಿಯಾಗಿರುವ ಒಂದು ಪಾತ್ರೆಗೆ ಮತ್ತಷ್ಟು ನೀರನ್ನು ಹಾಕಿದಾಗ ಏನಾಗುತ್ತೆ

a) ಪಾತ್ರೆ ತುಂಬಾ ನೀರು ಇರುತ್ತದೆ b) ಪಾತ್ರೆಯ ನೀರು ಖಾಲಿಯಾಗುತ್ತದೆ

c) ಸ್ವಲ್ಪ ನೀರು ಹೊರಚೆಲ್ಲುತ್ತದೆ d) ಏನೂ ಆಗುವುದಿಲ್ಲ

14. ದ್ರವ್ಯದ ಸ್ಥಿತಿಗಳನ್ನು ಆಧರಿಸಿ ಗುಂಪಿಗೆ ಸೇರದ ಪದವನ್ನು ಬರೆಯಿರಿ;

a) ಮಂಜುಗೆಡ್ಡೆ b) ಪುಸ್ತಕ c) ಚಂಡು d) ಹಾಲು

15. ನೀರನ್ನು ಫ್ರಿಜ್ ಅಲ್ಲಿ ಇಟ್ಟು ಸ್ವಲ್ಪ ಸಮಯದ ನಂತರ ತೆಗೆದಾಗ ಏನಾಗುತ್ತದೆ

a) ನೀರು ಹಾಗೆ ಇರುತ್ತದೆ b) ದ್ರವ್ಯದ ಸ್ಥಿತಿಯಿಂದ ಘನ ಸ್ಥಿತಿಗೆ ಬರುತ್ತದೆ

c) ಶಾಖದ ನೀರಾಗಿ ಬದಲಾಗುತ್ತದೆ d) ನೀರು ತಂಪಾಗಿ ಬದಲಾಗುತ್ತದೆ

16. ಭಾರತದ ನಕ್ಷೆಯಲ್ಲಿ ದಕ್ಷಿಣ ದಿಕ್ಕಿಗೆ ಇರುವ ರಾಜ್ಯ

a) ಉತ್ತರ ಪ್ರದೇಶ b) ದೆಹಲಿ c) ಅಸ್ಸಾಂ d) ಕರ್ನಾಟಕ

17. ಮಲಯಾಳಂ ಭಾಷೆಯನ್ನು ಬಳಸುವ ನೆರೆ ರಾಜ್ಯ

a) ಕರ್ನಾಟಕ b) ಕೇರಳ c) ತೆಲಂಗಾಣ d) ತಮಿಳುನಾಡು

18. ಇದು ಭಾರತದ ನೆರೆ ರಾಷ್ಟ್ರಗಳ ಗುಂಪು ಅಲ್ಲ

a) ಶ್ರೀಲಂಕಾ, ಚೀನಾ, ಪಾಕಿಸ್ತಾನ b) ಬಾಂಗ್ಲಾದೇಶ, ಚೀನಾ, ನೇಪಾಳ

c) ಕೆನಡಾ, ಯುಕೆ, ಚೀನಾ d) ಅಫ್ಘಾನಿಸ್ತಾನ, ಪಾಕಿಸ್ತಾನ, ಮಯನ್ಮಾರ್

19. ಭಾರತದ ನಕ್ಷೆಯಲ್ಲಿ ಪೂರ್ವ ದಿಕ್ಕಿನಲ್ಲಿರುವ ಜಲರಾಶಿ

a) ಬಂಗಾಳ ಕೊಲ್ಲಿ b) ಅರಬ್ಬಿ ಸಮುದ್ರ c) ಸಿಂಧೂ ಮಹಾಸಾಗರ

20. ಈ ಕೆಳಕಂಡ ಸ್ಥಳಗಳಲ್ಲಿ ಕೇಂದ್ರಾಡಳಿತ ಪ್ರದೇಶ ಗುರುತಿಸಿ

a) ಜಾರ್ಖಂಡ್ b) ಉತ್ತರಖಂಡ್ c) ನಗರ

II. **ಕೆಳಗಿನ** ಪ್ರಶ್ನೆಗಳಿಗೆ ನಿಗದಿಪಡಿಸಿರುವ ಸ್ಥಳಗಳಲ್ಲಿ ಉತ್ತರಗಳನ್ನು ಬರೆಯಿರಿ

21. ಕೆಳಗೆ ಕೊಟ್ಟಿರುವ ವಸ್ತುಗಳಲ್ಲಿ ಧಾತುಗಳನ್ನು ಆರಿಸಿ ಕೊಟ್ಟಿರುವ ಕೃತಿಯ ಒಳಗೆ ಬರೆಯಿರಿ **2 Marks**

ಗಾಳಿ ಚಿನ್ನ ನೀರು ಆಕ್ಸಿಜನ್ ಉಪ್ಪು ಹೈಡ್ರೋಜನ್ ಮಣ್ಣು

ಅಥವಾ

ನೈಸರ್ಗಿಕ ಸಂಪನ್ಮೂಲಗಳನ್ನು ಬರೆಯಿರಿ

22. ಕಾಡುಗಳಿಂದ ಆಗುವ ನಾಲ್ಕು ಅನುಕೂಲಗಳನ್ನು ಪಟ್ಟಿ ಮಾಡಿ **2 Marks**

ಅಥವಾ

ಮಣ್ಣಿನಿಂದ ಆಗುವ ನಾಲ್ಕು ಉಪಯೋಗಗಳನ್ನು ತಿಳಿಸಿ .

23. ದೇಹಕ್ಕೆ ರಕ್ಷಣೆ ಒದಗಿಸುವ ಆಹಾರ ಪದಾರ್ಥಗಳನ್ನು ಹೆಸರಿಸಿ **2 Marks**

ಅಥವಾ

ಸಾಮೂಹಿಕ ವಸ್ತುಗಳ ಮುಖ್ಯ ಉದ್ದೇಶಗಳನ್ನು ಬರೆಯಿರಿ

24. ಆಹಾರದಲ್ಲಿರುವ ಪೋಷಕಾಂಶಗಳನ್ನು ಬರೆಯಿರಿ **2 Marks**

ಅಥವಾ

ಮರುಭೂಮಿಯ ಲಕ್ಷಣಗಳನ್ನು ಪಟ್ಟಿ ಮಾಡಿ

25. ದಕ್ಷಿಣ ಭಾರತದ ಯಾವುದಾದರು ನಾಲ್ಕು ರಾಜ್ಯಗಳನ್ನು ಪಟ್ಟಿ ಮಾಡಿ **2 Marks**

ಅಥವಾ

ಉತ್ತರ ಭಾರತ ಮತ್ತು ದಕ್ಷಿಣ ಭಾರತದ ಪ್ರಮುಖ ನದಿಗಳನ್ನು ಪಟ್ಟಿಮಾಡಿ

26. ನವೀಕರಿಸಲಾಗದ ಸಂಪನ್ಮೂಲಗಳ ನಿರ್ವಹಣೆ ಹೇಗೆ ಮಾಡಬೇಕು **3 Marks**

ಅಥವಾ

ಮಣ್ಣು ಮತ್ತು ಸೌರಶಕ್ತಿ ಸಂಪನ್ಮೂಲಗಳ ಅವಶ್ಯಕತೆ ಬಗ್ಗೆ ಬರೆಯಿರಿ .

27. ಕೃಷಿಯ ಹಂತಗಳನ್ನು ಕ್ರಮವಾಗಿ ಬರೆಯಿರಿ **3 Marks**

ಅಥವಾ

ಸೌರವ್ಯೂಹದ ಗ್ರಹಗಳನ್ನು ಅನುಕ್ರಮವಾಗಿ ಹೆಸರಿಸಿ ಜೊತೆಗೆ ಸೂರ್ಯನಿಗೆ ಅತಿ ಸಮೀಪದಲ್ಲಿರುವ ಗ್ರಹ ಮತ್ತು ನಾವು ವಾಸಸುತ್ತಿರುವ ಗ್ರಹ ಅತ್ಯಂತ ದೂರ ಇರುವ ಗ್ರಹಗಳನ್ನು ಹೆಸರಿಸಿ ಅವುಗಳ ಬಗ್ಗೆ ಬರೆಯಿರಿ

28. ಕರ್ನಾಟಕ, ತಮಿಳುನಾಡು, ಉತ್ತರ ಪ್ರದೇಶ, ಗುಜರಾತ್ ಇವುಗಳನ್ನು ಗುರುತಿಸಿ ಅವುಗಳ ರಾಜಧಾನಿಗಳನ್ನು ಬರೆಯಿರಿ **4 Marks**

ಅಥವಾ

ಈ ಕೆಳಗಿನ ಈ ಕೆಳಗೆ ಕೊಟ್ಟಿರುವ ಭಾರತದ ನಕ್ಷೆಯಲ್ಲಿ ವಿಮಾನ ನಿಲ್ದಾಣಗಳನ್ನು ಗುರುತಿಸಿ

ಶಿವಾಜಿ ಮಹಾರಾಜ್ ವಿಮಾನ ನಿಲ್ದಾಣ

ಕೆಂಪೇಗೌಡ

ನೇತಾಜಿ ಸುಭಾಷ್ ಚಂದ್ರ ಬೋಸ್ ವಿಮಾನ ನಿಲ್ದಾಣ